

# ‘ದಂಗಾಲ್’ ಮೂಡಿಸಿದ ವಯಸ್ಸಿನ ತಳಮಳ

‘ಪಿಕೆ’ ಚಿತ್ರದ ಬಳಿಕ ಅಮೀರ್ ಖಾನ್ ನಟಿಸುತ್ತಿರುವ ‘ದಂಗಾಲ್’ ತೀವ್ರ ಕುತೂಹಲ ಮೂಡಿಸುತ್ತಿದೆ. ಅದರಲ್ಲೂ ಅಮೀರ್ ಪಾತ್ರದ ಬಗ್ಗೆ ಚರ್ಚೆಗಳು ನಡೆಯುತ್ತಿವೆ. ಇದುವರೆಗೂ ಅಮೀರ್ ತಮ್ಮ ನೈಜ ವಯಸ್ಸಿಗಿಂತ ‘ಯಂಗ್’ ಪಾತ್ರಗಳಲ್ಲಿಯೇ ಕಾಣಿಸಿಕೊಳ್ಳುತ್ತಿದ್ದ. ಆದರೆ ಇದೇ ಮೊದಲ ಬಾರಿಗೆ ಆತ ತನ್ನ ವಯಸ್ಸಿಗೆ ಬಹುತೇಕ ಸರಿಸಮಯವಾದ ಪಾತ್ರಕ್ಕೆ ಬಣ್ಣಹಚ್ಚಿದ್ದಾನೆ. ಸವಾಲಿನ ಪಾತ್ರವಾದರೂ ಅದು ಆತನಲ್ಲಿ ತಳಮಳವನ್ನೂ ಮೂಡಿಸಿದೆಯಂತೆ.

‘ದಂಗಾಲ್’ನಲ್ಲಿ ಅಮೀರ್, 55 ವರ್ಷದ ಮಹಾವೀರ್ ಸಿಂಗ್ ಫೋಗಟ್ ಎಂಬ ಜಟ್ಟಿಯಾಗಿ ಕಾಣಿಸಿಕೊಳ್ಳುತ್ತಿದ್ದಾನೆ. ‘ಇದು ನನ್ನ ನೈಜ ವಯಸ್ಸಿಗೆ ಹತ್ತಿರವಾದ ಪಾತ್ರ. ಹೀಗಾಗಿ ಅದರ ಬಗ್ಗೆ ಚಿಂತೆಯಾಗಿತ್ತು. ಏಕೆಂದರೆ ನಾನು ಇದುವರೆಗೂ ಯುವಕನ ಪಾತ್ರಗಳಲ್ಲಿ ನಟಿಸುತ್ತಿದ್ದೆ. ಇಲ್ಲಿ ವಯಸ್ಕನಾಗಿ, ದಪ್ಪಗೆ, ಬಿಳಿಗೂದಲು ಹೊಂದಿದವನಾಗಿ ಕಾಣಿಸಿಕೊಳ್ಳುತ್ತಿದ್ದೇನೆ. ಇದು ನನ್ನ ಭವಿಷ್ಯದ ಸಿನಿಮಾಗಳ ಬಗ್ಗೆ ಚಿಂತೆಯನ್ನೂ ಹುಟ್ಟುಹಾಕಿತ್ತು’ ಎಂದಿದ್ದಾನೆ ಅಮೀರ್.

‘ನಾನು ಈ ಚಿತ್ರವನ್ನು 5–6 ಅಥವಾ 8–10 ವರ್ಷಗಳ ಬಳಿಕ ಮಾಡಬಹುದು ಎನಿಸಿತ್ತು. ಕಾರ್ಯತಃ ಈ ಸಿನಿಮಾ ಮಾಡಬಾರದು ಎಂದುಕೊಂಡಿದ್ದೆ. ಆದರೆ ಮನಸು ಈ ಸಿನಿಮಾವನ್ನು ಮಾಡಲೇಬೇಕು ಎಂದಿತು’ ಎಂದು ತನ್ನೊಳಗಿನ ಗೊಂದಲವನ್ನು ಹೇಳಿಕೊಂಡಿದ್ದಾನೆ ಅಮೀರ್.

ಇದು ಮಹಾವೀರ್ ಸಿಂಗ್ ಫೋಗಟ್ ಅವರ ಜೀವನವನ್ನಾಧರಿಸಿದ ಚಿತ್ರ. ಈ ಕಾರಣಕ್ಕಾಗಿಯೇ ಅಮೀರ್ ಸಿನಿಮಾ ಮಾಡಲು ನಿರ್ಧರಿಸಿದ್ದಂತೆ. ಹೀಗಾಗಿ ಬೇರಾವುದರ ಕುರಿತೂ ಯೋಚಿಸದೆ ಸಿನಿಮಾ ಮಾಡಲು ಒಪ್ಪಿಕೊಂಡಿರುವುದಾಗಿ ನಿರ್ದೇಶಕ ನಿತೇಶ್ ತಿವಾರಿಗೆ ಅಮೀರ್ ಹೇಳಿಕೊಂಡನಂತೆ. ‘ನಾನು ಯಾವ ರೀತಿಯಲ್ಲಿ ಕಾಣಿಸಿಕೊಳ್ಳುತ್ತೇನೋ ಅದನ್ನು ಸಿನಿಮಾಗಾಗಿ ಬದಲಾದ ಬಗೆ ಎಂಬುದನ್ನು ಪ್ರೇಕ್ಷಕರು ಅರ್ಥ ಮಾಡಿಕೊಳ್ಳುತ್ತಾರೆ ಎಂಬ ನಂಬಿಕೆ ಇದೆ. ಆ ಪಾತ್ರಕ್ಕೆ ಬದ್ಧತೆ ತೋರಿದ್ದೇನಷ್ಟೆ. ಹೃದಯದ ಮಾತನ್ನು ಅನುಸರಿಸಿದ್ದೇನಷ್ಟೆ’ ಎಂದು ಅಮೀರ್ ಹೇಳಿಕೊಂಡಿದ್ದಾನೆ.

ಪ್ರಯೋಗಾತ್ಮಕ ಚಿತ್ರಗಳಲ್ಲಿ ನಟಿಸಿದ್ದರೂ ಅಮೀರ್, ತನ್ನ ವಯಸ್ಸಿಗೆ ಅನುಗುಣವಾದ ಪಾತ್ರವನ್ನು ಎಂದೂ ಮಾಡಿರಲಿಲ್ಲ. ಈ ಸಿನಿಮಾ ತನ್ನ ಮೂಲ ಇಮೇಜಿಗೆ ಧಕ್ಕೆ ತರಲಿದೆ ಎಂಬ ಆತಂಕ ಅಮೀರ್‌ಗೆ ಉಂಟಾಗಿದೆ. ಇದು ಭವಿಷ್ಯದ ಮೇಲೂ ಪರಿಣಾಮ ಬೀರಲಿದೆ ಎನ್ನುವುದು ಆತನ ಆತಂಕ ದ್ವಿಗುಣಗೊಳಿಸಿದೆ ಎನ್ನುತ್ತದೆ ಮೂಲಗಳು. ‘ದಂಗಾಲ್’ನ ಫೋಗಟ್‌ನನ್ನು ಪ್ರೇಕ್ಷಕರು ಮೆಚ್ಚಿಕೊಳ್ಳುತ್ತಾರಾ ಅಥವಾ ಇಲ್ಲವಾ ಎನ್ನುವುದಕ್ಕೆ ಡಿಸೆಂಬರ್ 23ರವರೆಗೆ ಕಾಯಬೇಕು.



# ಕಂಗನಾಗೆ ಪ್ರಶಸ್ತಿ; ರಿತುಗೆ ದುಃಖ



‘ತನು ವೆಡ್ಸ್ ಮನು ರಿಟರ್ನ್ಸ್’ ಚಿತ್ರದಲ್ಲಿನ ನಟನೆಗಾಗಿ ಕಂಗನಾ ರನೋಟ್‌ಗೆ ಅತ್ಯುತ್ತಮ ನಟಿ ರಾಷ್ಟ್ರ ಪ್ರಶಸ್ತಿ ಬಂದಾಗ ಅನೇಕರು ಹುಬ್ಬೇರಿಸಿದ್ದರು. ಏಕೆಂದರೆ, ಪ್ರಶಸ್ತಿಗೆ ಪರಿಗಣಿಸಬಹುದಾದ ಪಾತ್ರ ಹಾಗೂ ಅಭಿನಯವೇನೂ ಅದರಲ್ಲಿ ಇರಲಿಲ್ಲ. ಅದಕ್ಕಿಂತಲೂ ಅರ್ಹರಾಗಿದ್ದ ವಿವಿಧ ಭಾಷೆಯ ಸಾಕಷ್ಟು ನಟಿಯರಿದ್ದರು. ಆದರೆ, ಬಾಲಿವುಡ್ ಲಾಬಿ ಕಂಗನಾಗೆ ಪ್ರಶಸ್ತಿ ಕೊಡುವಂತೆ ಮಾಡಿತು ಎನ್ನುವ ಆರೋಪಗಳು ಇತರೆ ಭಾಷೆಗಳ ಚಿತ್ರರಂಗದಿಂದ ಕೇಳಿಬಂದಿದ್ದವು. ಈಗ ಬಂಗಾಳಿ ನಟಿ ರಿತುಪರ್ಣ ಸೇನ್‌ಗುಪ್ತಾ, ಆ ಪ್ರಶಸ್ತಿ ತನಗೆ ಬರಬೇಕಿತ್ತು. ಕಂಗನಾಗೆ ಆ ಚಿತ್ರದ ಅಭಿನಯಕ್ಕೆ ಪ್ರಶಸ್ತಿ ಪಡೆಯುವ ಅರ್ಹತೆಯೇ ಇರಲಿಲ್ಲ ಎಂದು ಅಲವತ್ತುಕೊಳ್ಳುತ್ತಿದ್ದಾಳೆ. ಕಳೆದ ವರ್ಷ ‘ಕ್ವೀನ್’ ಚಿತ್ರದ ಅಭಿನಯಕ್ಕೂ ಕಂಗನಾ ಪ್ರಶಸ್ತಿಯನ್ನು ತನ್ನ ಖಾತೆಗೆ ಪಡೆದುಕೊಂಡಿದ್ದಳು.

‘ರಾಜ್‌ಕಹಾನಿ’ ಬಂಗಾಳಿ ಚಿತ್ರದ ಅಭಿನಯಕ್ಕೆ ತನಗೆ ಪ್ರಶಸ್ತಿ ಬರಬೇಕಿತ್ತು. ಆದರೆ ಕಂಗನಾ ಎದುರು ಅದನ್ನು ಕಳೆದುಕೊಂಡದ್ದು ನ್ಯಾಯಸಮ್ಮತ ಎನಿಸುತ್ತಿಲ್ಲ ಎಂದು ಆಕೆ ಹೇಳಿಕೊಂಡಿದ್ದಾಳೆ. ಬೇರಾವುದೇ ಪ್ರಾದೇಶಿಕ ಭಾಷಾ ಚಿತ್ರದ ನಟಿಗೆ ಪ್ರಶಸ್ತಿ ಒಲಿದಿದ್ದರೆ ಆಕೆಗೆ ಬೇಸರವಾಗುತ್ತಿರಲಿಲ್ಲವಂತೆ. ಆದರೆ ಯಾವುದೇ ಮೌಲ್ಯ, ಗಟ್ಟಿ ಕಥೆ ಇಲ್ಲದ ಸಾಮಾನ್ಯ ಕಮರ್ಷಿಯಲ್ ಚಿತ್ರದ ಅಭಿನಯಕ್ಕೆ ಪ್ರಶಸ್ತಿ ನೀಡಿರುವುದು ಆಕೆಗೆ ಬೇಸರ ಉಂಟುಮಾಡಿದೆಯಂತೆ. ಪ್ರಾದೇಶಿಕ ಚಿತ್ರಗಳ ಕಲಾವಿದರು ಅರ್ಹರಾಗಿದ್ದರೂ ಪ್ರಶಸ್ತಿ ಸಿಗುವುದಿಲ್ಲ ಎಂದಿರುವ ರಿತು, ಕಂಗನಾಳ ನಟನೆಯಷ್ಟೇ ತನ್ನ ಅಭಿನಯ ಚೆನ್ನಾಗಿತ್ತು. ಆದರೆ ಇಲ್ಲಿ ಪ್ರತಿಭೆ ಮುಖ್ಯವಲ್ಲ, ಲಾಬಿಯಿಂದಲೇ ಎಲ್ಲವೂ ನಿರ್ಧಾರವಾಗುತ್ತದೆ ಎಂದು ಕಿಡಿಕಾರಿದ್ದಾಳೆ ರಿತು. ಪ್ರತಿ ಬಾರಿ ಚಲನಚಿತ್ರ ಪ್ರಶಸ್ತಿ ಪಟ್ಟಿ ಪ್ರಕಟವಾದಾಗಲೂ ಅಸಮಾಧಾನಗಳು ಪ್ರಕಟವಾಗುವುದು ಸಾಮಾನ್ಯ. ಇದು ರಾಜ್ಯಮಟ್ಟದ ಪ್ರಶಸ್ತಿ ವಿಚಾರದಲ್ಲೂ ಹೊರತಲ್ಲ. ಆದರೆ, ಕೇಂದ್ರ ಸರ್ಕಾರದ ಪ್ರಶಸ್ತಿಗಳ ವಿಚಾರದಲ್ಲಿ ಪ್ರಾದೇಶಿಕ ಸಿನಿಮಾಗಳು ಮತ್ತು ಕಲಾವಿದರು ನಿರ್ಲಕ್ಷ್ಯಕ್ಕೆ ಒಳಗಾಗುತ್ತಿರುವುದು ನಿರ್ವಿವಾದ. ಹಿಂದಿ ಲಾಬಿಯ ವಿರುದ್ಧ ಅಲ್ಲೊಂದು ಇಲ್ಲೊಂದು ಮಾತುಗಳು ಕೇಳಿಬಂದರೂ, ಅವು ಸಾಮೂಹಿಕ ದನಿಯಾಗಿ ಬದಲಾಗುತ್ತಿಲ್ಲ. ಹಾಗೆ ಆಗುವವರೆಗೂ ಈ ಕೊರಗು ಪ್ರತಿ ವರ್ಷ ಕೇಳುತ್ತಲೇ ಇರುತ್ತವೆ.